# ನಿಷ್ಠಾ ಆನ್‌ಲೈನ್ ತರಬೇತಿ

## ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ(ಪ್ರಾಥಮಿಕ ಶಾಲಾ ಶಿಕ್ಷಕರಿಗೆ)



### ನಿಷ್ಠಾ ತರಬೇತಿಯ ವಿಶೇಷತೆಗಳು

- ಇದು ಒಂದು ಮೆಗಾ ಟ್ರೈನಿಂಗ್ ಪ್ರೋಗ್ರಾಂ -ಏಕ ಕಾಲದಲ್ಲಿ 42 ಲಕ್ಷ ಶಿಕ್ಷಕರಿಗೆ ತರಬೇತಿಯಾಗುತ್ತಿದೆ.
- ಯಾವುದೇ ಸಮಯದಲ್ಲಿ ಯಾವುದೇ ಸ್ಥಳದಲ್ಲಿ ಪೂರ್ಣಗೊಳಿಸಬಹುದು.
- ಸ್ವ-ವೇಗದ ಕಲಿಕೆಗೆ ಅವಕಾಶವಿದೆ.
- ಪಠ್ಯ, ವೀಡಿಯೋ ಮತ್ತು ಸಂವಾದಾತ್ಮಕದಿಂದ ಕೂಡಿದ ವೈವಿಧ್ಯಮಯ ಕೋರ್ಸ್.
- ಯಶಸ್ವಿಯಾಗಿ ಕೋರ್ಸ್ ಪೂರ್ಣಗೊಳಿಸಿದವರಿಗೆ ಡಿಜಿಟಲ್ ಆಗಿ ಪ್ರಮಾಣಪತ್ರ ದೊರೆಯುತ್ತದೆ.
- ಇದು ರಾಷ್ಟ್ರಾದ್ಯಂತ ಏಕರೂಪವಾಗಿ ಅನುಷ್ಠಾನವಾಗುತ್ತಿರುವ ಅತೀ ದೊಡ್ಡ ತರಬೇತಿ.
- ತರಬೇತಿ ಕೇಂದ್ರಕ್ಕೆ ಬರುವ ಹೋಗುವ ಅವಶ್ಯಕತೆ ಇಲ್ಲ.
- ಕಲಿಯುವ ಹಂತದ ಗೊಂದಲಗಳನ್ನು KRP ಹಂತದಲ್ಲಿ ರಚಿಸಿರುವ ಟೆಲಿಗ್ರಾಂ ಗ್ರೂಪಿನಲ್ಲಿ ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದು.
- ಒಂದು ಕೋರ್ಸ್‌ಗೆ 2 ಗಂಟೆ ಸಮಯ ಮೀಸಲಿಟ್ಟರೆ ಸಾಕು.

**ಎಂ.ಆರ್.ಮಾರುತಿ,** ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು
ತರಬೇತಿ ಇಲಾಖೆ. ಬೆಂಗಳೂರು.



**ನಿಷ್ಠಾ ಕಾರ್ಯಕ್ರಮವು ಸಮಗ್ರ ಶಿಕ್ಷಕರ ತರಬೇತಿಯ ಮೂಲಕ ಶಾಲಾ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವ ಮತ್ತು ಸಾಮರ್ಥ್ಯವನ್ನು ಹೆಚ್ಚಿಸುವುದಾಗಿದೆ. ಪ್ರಾಥಮಿಕ ಹಂತದಲ್ಲಿ ಎಲ್ಲಾ ಶಿಕ್ಷಕರ ಮತ್ತು ಶಾಲಾ ಮುಖ್ಯಸ್ಥರ ವೃತ್ತಿಪರ ಸಾಮರ್ಥ್ಯವನ್ನು ಬೆಳೆಸುವ ಗುರಿ ಹೊಂದಿದೆ. ನಿಷ್ಠಾ ಕೋರ್ಸ್‌ಗಳನ್ನು ನವೆಂಬರ್ 03 ರಿಂದ ನಮ್ಮ ರಾಜ್ಯದ 1,52,733 ಶಿಕ್ಷಕರಿಗೆ ಆನ್ ಲೈನ್ ತರಬೇತಿ ನೀಡಲು ಯೋಜಿಸಲಾಗಿದೆ. ನಿಷ್ಠಾ ಆನ್‌ಲೈನ್ ತರಬೇತಿಯು ಕನ್ನಡ ಮತ್ತು ಇಂಗ್ಲೀಷ್ ಮಾಧ್ಯಮದಲ್ಲಿ ಲಭ್ಯವಿರುತ್ತದೆ.**

- ಸ್ಮಾರ್ಟ್ ಫೋನ್ ಮೂಲಕವೂ ಈ ಕೋರ್ಸ್ ಪೂರ್ಣಗೊಳಿಸಬಹುದು.






## ಈ ಆನ್‌ಲೈನ್ ತರಬೇತಿಯು ಒಳಗೊಂಡಿರುವ ಮುಖ್ಯ ಅಂಶಗಳು

- ವೈಯಕ್ತಿಕ – ಸಾಮಾಜಿಕ ಗುಣಗಳು
- ಆರೋಗ್ಯ ಮತ್ತು ಕ್ಷೇಮ
- ಕಲಾ ಸಮ್ಮಿಳಿತ ಕಲಿಕೆ
- ICT
- ವಿಷಯಾಧಾರಿತ ಶಿಕ್ಷಕರ ಶಿಕ್ಷಣ ಶಾಸ್ತ್ರ (Pedagogy)
- ಶಾಲಾ ನಾಯಕತ್ವ, ಇತ್ಯಾದಿ ಅಂಶಗಳನ್ನು ಕಲಿಕಾರ್ಥಿ ಕೇಂದ್ರಿತವಾಗಿ ಅನುಕೂಲಿಸಲಾಗಿದೆ.

ರಾಷ್ಟ್ರಹಂತದಲ್ಲಿ ಮಾನ್ಯ ಗೌರವಾನ್ವಿತ ಕೇಂದ್ರ ಶಿಕ್ಷಣ ಮಂತ್ರಿಗಳು, ಭಾರತ ಸರ್ಕಾರ ಇವರು ದಿನಾಂಕ 06.10.2020 ರಂದು ಆಂಗ್ಲ ಮಾಧ್ಯಮದಲ್ಲಿ ರಚಿಸಲಾಗಿರುವ ನಿಷ್ಠಾ ಆನ್‌ಲೈನ್ ಮಾಡ್ಯೂಲ್‌ಗಳನ್ನು ಲೋಕಾರ್ಪಣೆ ಮಾಡಿರುತ್ತಾರೆ. ಸದರಿ ಇಂಗ್ಲಿಷ್ ಮಾಡ್ಯೂಲ್‌ಗಳನ್ನು ಕನ್ನಡ ಭಾಷೆಗೆ ಅನುವಾದ ಮಾಡಲಾಗಿದೆ ದಿನಾಂಕ 03.11.2020 ರಿಂದ ರಾಜ್ಯದ ಶಿಕ್ಷಕರು ಆನ್‌ಲೈನ್ ಮೂಲಕ ತರಬೇತಿ ತೆಗೆದುಕೊಳ್ಳಲು ಯೋಜಿಸಿಕೊಳ್ಳಲಾಗಿದೆ.

ಈ ಕೋರ್ಸ್‌ಗಳನ್ನು ಮಾಹೆವಾರು ನಿಗದಿತ ಸಂಖ್ಯೆಯಲ್ಲಿ ಪೂರ್ಣಗೊಳಿಸಬೇಕಿದೆ. ಅಂದರೆ ಪ್ರತಿ 15 ದಿನಗಳಿಗೆ 3 ಕೋರ್ಸ್‌ಗಳನ್ನು ಪೂರ್ಣಗೊಳಿಸಬೇಕು. ಪ್ರತಿ ಕೋರ್ಸ್ ಪೂರ್ಣಗೊಳಿಸಿದಾಗ ಆನ್‌ಲೈನ್‌ನಲ್ಲಿ 7–14 ದಿನಗಳಲ್ಲಿ ಡಿಜಿಟಲ್ ಪ್ರಮಾಣಪತ್ರ ಸಿದ್ಧವಾಗುತ್ತದೆ.

ಈ ಎಲ್ಲಾ ಕೋರ್ಸ್‌ಗಳ ನಂತರ ಸಾಮರ್ಥ್ಯ ಆಧಾರಿತ ಮೌಲ್ಯಮಾಪನಾ ಇರುತದೆ ಅದನ್ನು ಪೂರ್ಣಗೊಳಿಸಿದರೆ ಒಟ್ಟಾರೆ ಅರ್ಹತೆಯ ಪ್ರಮಾಣಪತ್ರ ದೊರೆಯುತ್ತದೆ.

## ನಿಷ್ಠಾ ಕೋರ್ಸ್ ಮಾಡ್ಯೂಲ್‌ಗಳ ಶೀರ್ಷಿಕೆಗಳು

1. ಪಠ್ಯಕ್ರಮ ಮತ್ತು ಸಮನ್ವಯ ತರಗತಿ ಕೋಣೆಗಳು
2. ಸುರಕ್ಷಿತ ಮತ್ತು ಆರೋಗ್ಯಕರ ಶಾಲಾ ಪರಿಸರ ನಿರ್ಮಾಣಕ್ಕಾಗಿ ವೈಯಕ್ತಿಕ–ಸಾಮಾಜಿಕ ಗುಣಗಳ (ವೈ.ಸಾ.ಗು) ಅಭಿವೃದ್ಧಿ
3. ಶಾಲೆಗಳಲ್ಲಿ ಆರೋಗ್ಯ ಮತ್ತು ಕ್ಷೇಮ
4. ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಜೆಂಡರ್
5. ಐಸಿಟಿ ಸಮ್ಮಿಳಿತ ಬೋಧನೆ, ಕಲಿಕೆ ಮತ್ತು ಮೌಲ್ಯಾಂಕನ
6. ಕಲಾ ಸಮ್ಮಿಳಿತ ಕಲಿಕೆ
7. ಶಾಲಾ ಅಧಾರಿತ ಮೌಲ್ಯಾಂಕನ
8. ಪರಿಸರ ಅಧ್ಯಯನ ಶಿಕ್ಷಣಶಾಸ್ತ್ರ
9. ಗಣಿತದ ಶಿಕ್ಷಣ ಶಾಸ್ತ್ರ
10. ಸಮಾಜ ವಿಜ್ಞಾನದ ಶಿಕ್ಷಣ ಶಾಸ್ತ್ರ
11. ಭಾಷಾ ಶಿಕ್ಷಣ ಶಾಸ್ತ್ರ
12. ವಿಜ್ಞಾನದ ಶಿಕ್ಷಣ ಶಾಸ್ತ್ರ
13. ಶಾಲಾನಾಯಕತ್ವ : ಪರಿಕಲ್ಪನೆ ಮತ್ತು ಅನ್ವಯನ
14. ಶಾಲಾ ಶಿಕ್ಷಣದ ಉಪಕ್ರಮಗಳು
15. ಶಾಲಾ ಪೂರ್ವ ಶಿಕ್ಷಣ
16. ವೃತ್ತಿ ಪೂರ್ವ ಶಿಕ್ಷಣ
17 .ಕೋವಿಡ್– 19ರ ಸನ್ನಿವೇಶ: ಶಾಲಾ ಶಿಕ್ಷಣದಲ್ಲಿನ ಸವಾಲುಗಳನ್ನು ಎದುರಿಸುವುದು
18. ಮಕ್ಕಳ ಹಕ್ಕುಗಳು , ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ (CSA) ಮತ್ತು ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಗಟ್ಟುವಿಕೆ ಕಾಯ್ದೆ – 2012 ( POCSO )

# ಕಲಿವ ಮನವಿರೆ ಕಲಿಸುವುದು ನಿಷ್ಠಾ ಕೋರ್ಸು...




NISHTHA KARNATAKA

–ಡಾ.ಬಿ.ಎಂ.ಬೇವಿನಮರದ ಕ್ಷೇತ್ರ ಸಮನ್ವಯಾಧಿಕಾರಿ, ಹಾನಗಲ್ಲ, ಹಾವೇರಿ ಜಿಲ್ಲೆ, ಮೊ: 9901732979

ಕೋವಿಡ್ ಕಾಲದ ಈ ದಿನಗಳಲ್ಲಿ ಶಿಕ್ಷಣ ವ್ಯವಸ್ಥೆಯನ್ನು ನಿರ್ವಹಿಸುವುದೇ ತುಂಬಾ ಸವಾಲಿನ ಕಾರ್ಯವಾಗಿದೆ. ಒಂದು ಕಡೆ ಮಕ್ಕಳನ್ನು ಶಾಲೆಗೆ ಕರೆತಂದು ಬೋಧಿಸುವುದು ಕಷ್ಟಕರವಾದರೆ ಮತ್ತೊಂದೆಡೆ ಶಿಕ್ಷಕರಿಗೆ ಮುಖಾಮುಖಿ ತರಬೇತಿ ನೀಡುವುದೂ ಕಷ್ಟಸಾಧ್ಯವೆನಿಸಿದೆ. ದೈಹಿಕ ಅಂತರ ಕಾಪಾಡುವುದಕ್ಕೋಸ್ಕರ ಮಕ್ಕಳಿಗೆ ಶಾಲೆಯಿಂದ ವಿನಾಯಿತಿ ನೀಡಲಾಗಿದೆ. ವಿದ್ಯಾಗಮದ ಮೂಲಕ ಎಲ್ಲಾ ಮಕ್ಕಳಿಗೆ ಪಠ್ಯದ ಕನಿಷ್ಠ ಜ್ಞಾನವನ್ನು ತಲುಪಿಸುವ ಪ್ರಯತ್ನವನ್ನೂ ಮಾಡಿಯಾಗಿದೆ. ಅದರಿಂದ ಪೂರ್ಣ ಯಶಸ್ಸನ್ನು ಸಾಧಿಸಲಾಗದಿದ್ದರೂ ಮಕ್ಕಳಲ್ಲಿ ಶೈಕ್ಷಣಿಕ ಚಟುವಟಿಕೆಗಳು ಮುಂದುವರೆಯಲು ಹಾಗೂ ಶಿಕ್ಷಣ ವ್ಯವಸ್ಥೆಯ ಜೊತೆ ನಿರಂತರ ಸಂಪರ್ಕ ಉಳಿಸಿಕೊಳ್ಳಲಂತೂ ಸಾಧ್ಯವಾಗಿದೆ. ಶೈಕ್ಷಣಿಕ ಪ್ರಕ್ರಿಯೆಯಲ್ಲಿ ವಿವಿಧ ಆಯಾಮಗಳ ಮೂಲಕ ಮಕ್ಕಳಿಗೆ ಜ್ಞಾನವನ್ನು ವರ್ಗಾಂತರಿಸುವುದು ಎಷ್ಟು ಮುಖ್ಯವೋ, ಶಿಕ್ಷಕರನ್ನು ಸಿದ್ಧಗೊಳಿಸುವುದೂ ಅಷ್ಟೇ ಮುಖ್ಯವಾಗುತ್ತದೆ. ಈ ಪ್ರಕ್ರಿಯೆ ಉನ್ನತವಾದಷ್ಟೂ ಶಿಕ್ಷಣ ಎಂಬ ಪರಿಕಲ್ಪನೆ ಪರಿಪೂರ್ಣತೆಯೆಡೆಗೆ ಸಾಗುತ್ತದೆ. ಇಲ್ಲದಿದ್ದಲ್ಲಿ ಒಂದು ಸಾಮಾಜಿಕ ವ್ಯವಸ್ಥೆಯೇ ಹಿಮ್ಮುಖವಾಗಿ ಚಲಿಸಲಾರಂಭಿಸುತ್ತದೆ. ಹಾಗಾಗಿ ಬೋಧಕನ ಗುಣಮಟ್ಟ ಉತ್ಕೃಷ್ಟವಾಗಿರುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ಇಲಾಖೆಗಿದೆ. ಅಷ್ಟೇ ಶ್ರದ್ಧೆಯಿಂದ ಅದನ್ನು ಅನುಷ್ಠಾನಗೊಳಿಸಿಕೊಳ್ಳುವುದು ಒಬ್ಬ ಶಿಕ್ಷಕನ ಜವಾಬ್ದಾರಿಯೂ ಆಗಿದೆ. ಎನ್.ಸಿ.ಇ.ಆರ್.ಟಿ.ಯು ನವೆಂಬರ್ ತಿಂಗಳಿನಿಂದ ಪ್ರಾಥಮಿಕ ಶಿಕ್ಷಣ(ಒಂದರಿಂದ ಎಂಟನೇ ತರಗತಿ)ದಲ್ಲಿ ಬೋಧಿಸುವ ದೇಶದ ಎಲ್ಲಾ ಶಿಕ್ಷಕರಿಗೆ ಸ್ವಯಂ ಕಲಿಕೆಯ ರೂಪದ **ನಿಷ್ಠಾ**(NISHTHA-National Initiative for School Heads' and Teachers' Holistic Advancement) ಆನ್‌ಲೈನ್ ತರಬೇತಿಯನ್ನು ಜಾರಿಗೆ ತಂದಿದೆ. ಕರ್ನಾಟಕದಲ್ಲಿ ಡಿ.ಎಸ್.ಇ.ಆರ್.ಟಿ.ಯು ಈ ತರಬೇತಿ ನಿರ್ವಹಿಸುವ ಹೊಣೆಗಾರಿಕೆ ಹೊಂದಿದೆ. 'ಶಿಕ್ಷಕರು ತಾವು ಏನನ್ನು ಕಲಿಯಲು ಬಯಸುತ್ತಾರೋ ಅವುಗಳನ್ನು ಕಲಿಯಲು ಅನುಕೂಲವಾಗುವಂತೆ ಶಿಕ್ಷಕರ ನಿರಂತರ ವೃತ್ತಿಪರ ಅಭಿವೃದ್ಧಿಯು ನಮ್ಮ ಮತ್ತು ಮಾಡ್ಯುಲರ್ ವಿಧಾನವನ್ನು ಆಧರಿಸಿದೆ' ಎನ್ನುವ ರಾಷ್ಟ್ರೀಯ ಶಿಕ್ಷಣ ನೀತಿ 2020ರ ವ್ಯಾಖ್ಯಾನದಂತೆ ಎಲ್ಲಾ ಶಿಕ್ಷಕರಿಗೂ ಇಲಾಖೆಯಿಂದ ಸ್ವಯಂ ಕಲಿಕೆ, ಸ್ವಯಂ ಅಭಿವೃದ್ಧಿ, ಸ್ವಯಂ ಮೌಲ್ಯಮಾಪನದಡಿಯಲ್ಲಿ ಕೋರ್ಸ್‌ಗಳ ಮೂಲಕ ತರಬೇತುಗೊಳಿಸಲು ಯೋಜಿಸಿರುವುದು ಸಕಾಲವೆನಿಸಿದೆ.

### ನಿಷ್ಠಾ ಪರಿಕಲ್ಪನೆ

'ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಸಮಗ್ರ ಮುನ್ನಡೆಗಾಗಿ ರಾಷ್ಟ್ರೀಯ ಉಪಕ್ರಮ'– ಎನ್ನುವ ಇದು ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರ ಜ್ಞಾನ, ಕೌಶಲ್ಯ, ಮನೋವೃತ್ತಿಗಳನ್ನು ಅಭಿವೃದ್ಧಿಗೊಳಿಸುವುದರ ಜೊತೆಗೆ ಬದಲಾಗುತ್ತಿರುವ ಶಿಕ್ಷಣ ವ್ಯವಸ್ಥೆಗೆ ಶಿಕ್ಷಕರನ್ನು ಸಿದ್ಧಗೊಳಿಸುವ, ಶಿಕ್ಷಣದಲ್ಲಿ ಸಮ್ಮಿಳಿತ ಕಲಿಕೆಯನ್ನುಂಟು ಮಾಡುವ, ಕಲಿಕಾ ಪ್ರಕ್ರಿಯೆಯಲ್ಲಿ ತಾಂತ್ರಿಕ ಬಳಕೆಯನ್ನು ಉತ್ತೇಜಿಸುವ ಉದ್ದೇಶಗಳನ್ನು ಹೊಂದಿದೆ. ಇದು ಕೇವಲ ತರಬೇತಿಯಾಗಿರದೇ ಶಿಕ್ಷಕರ ವೃತ್ತಿ ಕೌಶಲ್ಯವನ್ನು ವೃದ್ಧಿ ಮಾಡುವುದನ್ನೂ ಒಳಗೊಂಡಿದೆ. ಆ ಮೂಲಕ 'ಶಾಲೆ' ಎಂಬ ಪರಿಕಲ್ಪನೆಯನ್ನೇ ಉನ್ನತ ಮಟ್ಟಕ್ಕೆ ಕೊಂಡೊಯ್ಯುವುದಾಗಿದೆ. ರಾಜ್ಯದ ಪ್ರತಿ ಬ್ಲಾಕ್‌ನ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ SRP-L(State Resource Person-Leadership) ಹಾಗೂ ಐವರು ಶಿಕ್ಷಕರಿಗೆ KRP(Key Resource Person) ತರಬೇತಿ ನೀಡಲಾಗಿದೆ. ಈ ತಂಡ ಬ್ಲಾಕ್ ಹಂತದಲ್ಲಿ ತರಬೇತಿಗೆ ಬೆಂಬಲವಾಗಿ ಇರುತ್ತದೆ. ಶಿಕ್ಷಕರು ಆರಂಭದಲ್ಲಿ ಕಡ್ಡಾಯವಾಗಿ ಟೆಲಿಗ್ರಾಂ, ದೀಕ್ಷಾ, ನಿಷ್ಠಾ ಮತ್ತು ವೆಬಿನಾರ್‌ಗಾಗಿ ಅವಶ್ಯವಿರುವ ಕೆ.ಆರ್.ಪಿ.ರವರು ಸೂಚಿಸುವ ಆ್ಯಪ್‌ಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಪ್ರತಿಯೊಬ್ಬ ಶಿಕ್ಷಕ ಇಲಾಖೆಯಿಂದ ಕಳುಹಿಸಲಾದ ಯೂಸರ್ ಐಡಿ ಮತ್ತು




ಪಾಸ್‌ವರ್ಡ್‌ಗಳ ಸಹಾಯದೊಂದಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಾಗಿನ್ ಆಗಿ ಕೋರ್ಸ್‌ಗಳನ್ನು ಕಲಿಯಬೇಕಾಗುತ್ತದೆ. ತಮ್ಮ ತಾಂತ್ರಿಕ ಸಮಸ್ಯೆಗಳಿಗೆ ಬ್ಲಾಕ್ ಹಂತದ ತಾಂತ್ರಿಕ ಸಮಿತಿಯ ಸಹಾಯದಿಂದ ಪರಿಹಾರ ಕಂಡುಕೊಳ್ಳುವ ಅನುಕೂಲವೂ ಇದೆ. ಶಿಕ್ಷಕ ಮಿತ್ರ ಆ್ಯಪ್ ಅಪ್ಡೇಟ್ ಆಗದಿದ್ದಲ್ಲಿ ಅದನ್ನು ಮೊದಲು ಸರಿಪಡಿಸಿಕೊಂಡು ಲಾಗಿನ್ ಆದರೆ ಅರ್ಧ ಸಮಸ್ಯೆ ಪರಿಹಾರವಾದಂತೆ. ಅದಕ್ಕೆ ಬಿ.ಇ.ಓ. ಕಛೇರಿ, ಬ್ಲಾಕ್ ಮತ್ತು ಜಿಲ್ಲಾ ಹಂತದ ಕಂಪ್ಯೂಟರ್ ಪ್ರೋಗ್ರಾಮರ್ ಅವರನ್ನು ಸಂಪರ್ಕಿಸುವುದೊಳಿತು.

ಸ್ವಯಂ ಕಲಿಕೆಯ ಆನ್ಲೈನ್ ತರಬೇತಿ ಒಳಗೊಂಡಿರುವ ನಿಷ್ಠಾದಲ್ಲಿ ಒಟ್ಟು ಹದಿನೆಂಟು ಕೋರ್ಸ್‌ಗಳಿದ್ದು ಪ್ರತಿಯೊಂದು ಕೋರ್ಸ್ ಗರಿಷ್ಠ ಎರಡು ಗಂಟೆಗಳ ಮಿತಿಯನ್ನು ಹೊಂದಿರುತ್ತದೆ. ಒಂದು ಕೋರ್ಸ್‌ಗೆ ಸರಾಸರಿ ಐದು ದಿನಗಳ ಅವಧಿ ಲಭಿಸುವುದರಿಂದ ಕಲಿಯಲು ಸಾಕಷ್ಟು ಸಮಯಾವಕಾಶವಿದೆ. ವಸ್ತುವಿಷಯ, ಚಟುವಟಿಕೆ, ಪಜಲ್, ಕ್ವಿಝ್, ವಿಡಿಯೋ ಇತ್ಯಾದಿ ರೂಪದಲ್ಲಿ ಪಠ್ಯಾಂಶವಿರುತ್ತದೆ. ಸಾಮಾನ್ಯ ವಿಭಾಗದಲ್ಲಿ ಏಳು ಕೋರ್ಸ್‌ಗಳು, ವಿಷಯಾಧಾರಿತ ಶಿಕ್ಷಣ ಶಾಸ್ತ್ರದ ಐದು ಕೋರ್ಸ್‌ಗಳು(ಗಣಿತ, ಪರಿಸರ, ವಿಜ್ಞಾನ, ಸಮಾಜ ಮತ್ತು ಭಾಷೆಗಳು), ಶಾಲಾ ನಾಯಕತ್ವಕ್ಕೆ ಸಂಬಂಧಿಸಿದ ಐದು ಕೋರ್ಸ್‌ಗಳು ಹಾಗೂ ಪೋಕ್ಸೋಗೆ ಸಂಬಂಧಿಸಿದ ಒಂದು ಕೋರ್ಸ್ ಇದರಲ್ಲಿ ಅಡಕವಾಗಿವೆ. ಪ್ರತಿ ಕೋರ್ಸನ್ನು ಆಯ್ಕೆ ಮಾಡಿಕೊಂಡು ಕಲಿಯುತ್ತಾ ಹೋದಂತೆ ಶೇಕಡಾ ಪ್ರಗತಿ ಹೆಚ್ಚುತ್ತಿರುತ್ತದೆ. ಅಂತಿಮವಾಗಿ ಸ್ವಮೌಲ್ಯಮಾಪನದ ಪ್ರಶ್ನೆಗಳಿಗೆ ಸರಿಯಾದ ಉತ್ತರದ ಪ್ರತಿಕ್ರಿಯೆಗಳನ್ನು ನೀಡುವ ಮೂಲಕ ಪ್ರತಿಯೊಂದು ಕೋರ್ಸ್‌ಗಳನ್ನು ಪೂರೈಸಬೇಕಾಗುತ್ತದೆ.

ಪ್ರತಿ ಕೋರ್ಸ್ ಪೂರ್ಣಗೊಳಿಸಿದವರಿಗೆ ಇಲಾಖೆಯಿಂದ ಪ್ರಮಾಣಪತ್ರ ಲಭಿಸುತದೆ. ಕೆ.ಆರ್.ಪಿ.ರವರು ತಮಗೆ ವಹಿಸಲಾದ ಶಿಕ್ಷಕರ ಪ್ರೊಫೈಲ್ ಐಡಿ ಪಡೆದು ಧೀಕ್ಷಾ ಗುಂಪನ್ನು ರಚಿಸಿಕೊಂಡು ದಿನನಿತ್ಯ ಪ್ರತಿಯೊಬ್ಬ ಶಿಕ್ಷಕರ ಪ್ರಗತಿ ವರದಿಯನ್ನು ಅವಲೋಕಿಸುವರು. ಪೂರಕವಾಗಿ ಶಿಕ್ಷಕ ಶೀಘ್ರಗತಿಯಲ್ಲಿ ಕೋರ್ಸ್‌ಗಳನ್ನು ಅರ್ಥೈಸಿಕೊಂಡು ಪೂರ್ಣಗೊಳಿಸಲು ಪ್ರೇರೇಪಿಸುವರು. ಅಗತ್ಯವಿರುವ ಶಿಕ್ಷಕರಿಗೆ ವೆಬಿನಾರ್/ಯೂ–ಟ್ಯೂಬ್ ಚಾನಲ್‌ಗಳ ಮೂಲಕ ಕ್ಲಿಷ್ಟಾಂಶಗಳನ್ನು ಪರಿಹರಿಸುವ ಮೂಲಕ ಕಲಿಕೆಯನ್ನು ಸುಲಭಗೊಳಿಸುವರು. ಡಿ.ಎಸ್.ಇ.ಆರ್.ಟಿ., ಡಯಟ್, ಡಿಡಿಪಿಐ, ಬ್ಲಾಕ್, ಸಿ.ಆರ್.ಸಿ. ಹಂತದ ಮೇಲ್ವಿಚಾರಣಾ ಅಧಿಕಾರಿಗಳೂ ಕೂಡ ಈ ಪ್ರಕ್ರಿಯೆಯಲ್ಲಿ ಸದಾ ಬೆಂಬಲವಾಗಿ ಇರುತ್ತಾರೆ. ಒಟ್ಟಿನಲ್ಲಿ ಮಕ್ಕಳಿಗೆ ವಿದ್ಯಾಗಮ ಮಾಡಿಯಾಯಿತು. ಈಗ ಶಿಕ್ಷಕರಿಗೆ ವಿದ್ಯಾಗಮದ ಸರದಿ.

**ಕಲಿಕೆಗಿರಲಿ ಕಲಿಯುವ ಬದ್ಧತೆ :** ಶಿಕ್ಷಕ ಜಗತ್ತಿನ ಬೌದ್ಧಿಕ ಶಕಿಯ ರಚನೆಕಾರ. ಒಂದು ದೇಶದ ಪ್ರಗತಿಯ ನೋಟ ಆ ದೇಶದ ಶಿಕ್ಷಕನ ಬೌದ್ಧಿಕ ಮಟ್ಟವನ್ನು ಅವಲಂಭಿಸಿರುತದೆ. ದೇಶದ ಭವಿಷ್ಯ ಮಕ್ಕಳ ಕೈಯಲ್ಲಿದ್ದರೆ, ಮಕ್ಕಳ ಭವಿಷ್ಯ ಶಿಕ್ಷಕರ ಕೈಯಲ್ಲಿದೆ. ಹಾಗಾಗಿ ಶಿಕ್ಷಕ ಸದಾ ಅಪ್ಡೇಟ್ ಆಗುತ್ತಿರಬೇಕು. ಕಾಲದಡಿಯಲ್ಲಿನ ಬದಲಾವಣೆಯನ್ನು ಮೊದಲೇ ಅರಿತು ಹೊಂದಿಕೊಳ್ಳುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುವವರು ಮಾತ್ರ ಯಶಸ್ವಿ ಶಿಕ್ಷಕರಾಗಲು ಸಾಧ್ಯ. ಕಪ್ಪು ಹಲಗೆ, ಸೀಮೆ ಸುಣ್ಣದಿಂದ ಡಿಜಿಟಲ್ ವೇದಿಕೆಗೆ ಪರಿವರ್ತನೆ ಹೊಂದುವ ಪರ್ವಕಾಲವಿದು. ಪ್ರಸುತ ಪರಿಸ್ಥಿತಿಯಲ್ಲಿ ಶಿಕ್ಷಕರಿಗೆ ಮುಖಾಮುಖಿ ತರಬೇತಿ ನೀಡುವುದು ಸುಲಭ ಸಾಧ್ಯದ ಕೆಲಸವಲ್ಲ. ಅದು ಸಾಧುವೂ ಅಲ್ಲ. ಹೀಗಾಗಿ ಎನ್.ಸಿ.ಇ.ಆರ್.ಟಿ.ಯೇ ದೇಶದಾದ್ಯಂತ ಶಿಕ್ಷಕರ ತರಬೇತಿಗಾಗಿ ಡಿಜಿಟಲ್ ವಿಧಾನವನ್ನು ಅನುಸರಿಸುತ್ತಿದೆ. ಅದು ಅನಿವಾರ್ಯವೂ ಕೂಡ. ಶಿಕ್ಷಕರ ವೃತ್ತಿಪರ ಸಾಮರ್ಥ್ಯವನ್ನು ಹೆಚ್ಚಿಸಲು ನಿಷ್ಠಾ ಕೋರ್ಸ್‌ಗಳು ತುಂಬಾ ಸಹಾಯಕಾರಿಯಾಗಿವೆ. ಅದನ್ನು ಪೂರೈಸಲು ಸಭೆ, ವೆಬಿನಾರ್, ಪಿಪಿಟಿ, ವಿಡಿಯೋ ರವಾನೆ– ಹೀಗೆ ವಿವಿಧ ವಿಧಾನಗಳ ಮೂಲಕ ಈಗಾಗಲೇ ಶಿಕಕರಿಗೆ ಮನವರಿಕೆ ಮಾಡಲಾಗಿದೆ. ಮುಂದಿರುವುದು ಕಲಿಯುವ ಸರದಿ. ಕಲಿವ ಮನಮಿರೆ ಕಲಿಸುವುದು ಮಣ್ಣಿನ ಗೊಂಬೆ ಎನ್ನುವ ಮಾತು ಮಹಾಭಾರತದ ಏಕಲವ್ಯನ ಪ್ರಸಂಗದಿಂದ ತಿಳಿದುಕೊಂಡಿರುವ ಸಂಗತಿ. ಆ ಕೇಂದ್ರೀಕೃತ ಮನಸ್ಸು ಪ್ರತಿಯೊಬ್ಬರಲ್ಲಿದ್ದರೆ ನಿಷ್ಠಾ ಕೋರ್ಸ್‌ಗಳು ಸುಲಭದಲ್ಲಿ ದಕ್ಕುತ್ತವೆ. ಪ್ರಸ್ತುತ ಇಲಾಖೆಯಿಂದ ಅನುಷ್ಠಾನಗೊಂಡಿರುವ ಧೀಕ್ಷಾ ಆ್ಯಪ್‌ನಲ್ಲಿ ಪ್ರತಿಯೊಬ್ಬ ಶಿಕ್ಷಕರು ತಮ್ಮನ್ನು ತಾವು ಪೂರ್ಣಪ್ರಮಾಣದಲ್ಲಿ ತೊಡಗಿಸಿಕೊಳ್ಳಬೇಕು.



ಪುಟ: 33ಕ್ಕೆ..